


International Journal of Kannada Research
www.kannadajournal.com

ISSN: 2454–5813
IJKR 2024; 10(2): 12-16
© 2024 IJKR
www.kannadajournal.com
Received: 22-01-2024
Accepted: 26-02-2024

**ಪ್ರಜ್ವಲ್ ಎಸ್**
ಅಂತಿಮ ಬಿ ಕಾಂ ವಿದ್ಯಾರ್ಥಿ,
ಶೇಷಾದ್ರಿಪುರಂ ಇನ್ಸಿಟ್ಯೂಟ್ ಆಫ್ ಕಾಮರ್ಸ್ ಮತ್ತು ಮ್ಯಾನೇಜ್ಮೆಂಟ್,
ಶೇಷಾದ್ರಿಪುರಂ, ಬೆಂಗಳೂರು,
ಕರ್ನಾಟಕ, ಭಾರತ

**Corresponding Author:**
**ಪ್ರಜ್ವಲ್ ಎಸ್**
ಅಂತಿಮ ಬಿ ಕಾಂ ವಿದ್ಯಾರ್ಥಿ,
ಶೇಷಾದ್ರಿಪುರಂ ಇನ್ಸಿಟ್ಯೂಟ್ ಆಫ್ ಕಾಮರ್ಸ್ ಮತ್ತು ಮ್ಯಾನೇಜ್ಮೆಂಟ್,
ಶೇಷಾದ್ರಿಪುರಂ, ಬೆಂಗಳೂರು,
ಕರ್ನಾಟಕ, ಭಾರತ

# ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ "ಸ್ವಪ್ನಗಳ" ಪಾತ್ರ

**ಪ್ರಜ್ವಲ್ ಎಸ್**

**ಪೀಠಿಕೆ**

ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಸುಮಾರು ಹದಿನಾರು ಕಡೆಗಳಲ್ಲಿ ಸ್ವಪ್ನಗಳ ಪ್ರಸ್ತಾಪ ಬರುತ್ತವೆ. ಅವುಗಳಲ್ಲಿ ಆರು ಸ್ವಪ್ನಗಳು ಮುಖ್ಯವಾದವು ಮತ್ತು ವಿಸ್ತೃತವಾದವುಗಳು.

ಸ್ವಪ್ನ ಎನ್ನುವುದು ವ್ಯಕ್ತಿಯೊಬ್ಬ ತನ್ನ ಪ್ರಜ್ಞೆಯಲ್ಲಿ ಪಡೆದ ಅನುಭವ. ಮನುಷ್ಯನ ಬಯಕೆಗಳು, ಶಂಕೆಗಳು, ಭಯಗಳು, ನೆನಪುಗಳು, ಅನುಭವಗಳು ಅವನ ಜಾಗೃದಾವಸ್ಥೆಯಲ್ಲಿ ಪ್ರಕಟಗೊಳ್ಳಲು ಅವಕಾಶವಿಲ್ಲದಿದ್ದಾಗ ಅದಕ್ಕೆ ವ್ಯತಿರಿಕ್ತವಾದ ಸುಪ್ತಾವಸ್ಥೆಯಲ್ಲಿ ಪ್ರಕಟಗೊಳ್ಳುತ್ತವೆ. ಅಂದರೆ ನಿದ್ರೆಯಲ್ಲಿ ಮನಸ್ಸಿನ ಎರಡನೇ ಪದರವಾದ ಸುಪ್ತಚೇತನದ ಭಾವನೆಗಳು ಕನಸುಗಳ ಮೂಲಕ ಪ್ರಕಟಗೊಳ್ಳುತ್ತವೆ. ಆದರೆ ಅವು ನೇರವಾಗಿ ಪ್ರಕಟಗೊಳ್ಳುವುದಿಲ್ಲ, ಬದಲಿಗೆ ಕೆಲವು ಸಂಕೇತಗಳ ಮೂಲಕ ಪ್ರಕಟಗೊಳ್ಳುತ್ತವೆ.

ಇಂತಹ ಕನಸುಗಳು ಅರ್ಥಪೂರ್ಣವಾಗಿರಬಹುದು, ಅರ್ಥಹೀನವಾಗಿರಬಹುದು; ವಾಸ್ತವವನ್ನ ಹೋಲಬಹುದು, ಹೋಲದೆ ಇರಬಹುದು. ಆದರೆ, ಮನುಷ್ಯನ ಒಳಪ್ರಜ್ಞೆಯ ತಲಾತಲದಲ್ಲಿ ಹುದುಗಿದ ಆಸೆ–ಭಯ–ಆಶಂಕೆ ಇತ್ಯಾದಿಗಳಿಗೆ ನಿದ್ರಾ ಸಮುದ್ರ ಶಿಲ್ಪಿ ಕಡೆದೆಬ್ಬಿಸಿದ ಆಕಾರಗಳು ಹೇಗಿರುತ್ತವೆ ಎಂಬುದನ್ನು ಸೂತ್ರೀಕರಿಸಿ ಹೇಳಲು ಸಾಧ್ಯವಿಲ್ಲ. ಒಂದೆಡೆ ಕುವೆಂಪು ಹೇಳುವಂತೆ ಸ್ವಪ್ನವು ಜಾಗೃದಾವಸ್ಥೆಯ ಅನುಭವಗಳಿಗೆ ಜಾಗ್ರಜಗತ್ತಿನ ಆಕಾರಗಳನ್ನೇ ಕಲ್ಪಿಸಿದರೆ ಆಗ ಆ ಸೃಷ್ಟಿ ಪ್ರತಿಕೃತಿಯಾಗುತ್ತದೆ. ಹಾಗಲ್ಲದೆ ಜಾಗ್ರದವಸ್ಥೆಯ ಅನುಭವಕ್ಕೆ ಸಾಂಕೇತಿಕ ಪ್ರತೀಕವನ್ನು ನಿರ್ಮಿಸಿದರೆ ಆಗ ಆ ಸೃಷ್ಟಿ ಪ್ರತಿಮೆಯಾಗುತ್ತದೆ. ಆ ಪ್ರತಿಮೆಯಂತಹ ಆಕೃತಿಯನ್ನು ನಾವು ಜಾಗೃದವಸ್ಥೆಯ ಜಗತ್ತಿನಲ್ಲಿ ಎಲ್ಲಿಯೂ ಎಂದೂ ಕಾಣದಿದ್ದರೂ ಅದನ್ನು ಸುಳ್ಳು ಎನ್ನಲಾಗುವುದಿಲ್ಲ. ಯಾಕೆಂದರೆ ಕನಸಿಗೆ ಕಾರಣವಾದ ಅನುಭವ ಮಾತ್ರ ಕನಸಿಗೂ ಎಚ್ಚರಕ್ಕೂ ಸತ್ಯ. ಒಂದು ನೆಲೆಯಲ್ಲಿ ಸಾಹಿತ್ಯ ನಿರ್ಮಿತಿಯಲ್ಲಿನ, ಸಂಕೇತ, ಪ್ರತೀಕ, ಪ್ರತಿಮೆ ಇತ್ಯಾದಿಗಳಿಗೂ ಇರುವಂತ ಅರ್ಥ, ಸ್ವಪ್ನಗಳ ಸಂಕೇತ ಪ್ರತೀಕಾದಿಗಳಿಗೂ ಉಂಟು. ಈ ಅರ್ಥದಲ್ಲಿ ಸ್ವಪ್ನಸೃಷ್ಟಿಗೂ, ಕಲಾಸೃಷ್ಟಿಗೂ ಸಂಬಂಧವಿದೆ. ಯಾಕೆಂದರೆ ಅವೆರಡೂ ಮೂಲತಃ ಮನಸ್ಸಿನ ಸೃಷ್ಟಿಗಳು. ಆದರೆ, ಇವೆರಡಕ್ಕೂ ಮುಖ್ಯವಾದ ವ್ಯತ್ಯಾಸವಿರುವುದು, ಸ್ವಪ್ನಗಳು ಜಾಗೃದವಸ್ಥೆಗೆ ಮಿಥ್ಯೆಯಾಗಿಬಿಡುತ್ತವೆ. ಕಲಾಕೃತಿಗಳು ಎಷ್ಟೋ ವೇಳೆ ಕನಸಿನಂತೆ ತೋರಿದರೂ, ವಾಸ್ತವದನೆಲೆಯಲ್ಲಿ ಮಿಥ್ಯೆಯಾಗದೆ, ಬೇರೊಂದು ಅರ್ಥವಂತಿಕೆಯನ್ನು ಪಡೆದುಕೊಳ್ಳುತ್ತವೆ.



**ವಿವರಣೆ:**

ಸಾಹಿತ್ಯವನ್ನು ಡಿ.ಆರ್. ನಾಗರಾಜ್ ನಿಯಂತ್ರಿತ ಕನಸು ಎಂದು ಉಲ್ಲೇಖಿಸುತ್ತಾರೆ. ಈ ನಿಟ್ಟಿನಲ್ಲಿ ಕವಿಯನ್ನು ಕನಸುಗಾರ ಎಂದು ಕರೆಯುವ ವಾಡಿಕೆ ಇದೆ. ಕವಿಯು ತಾನು ಕಂಡ ಕನಸು ಮತ್ತು ಕಲ್ಪನೆಗಳನ್ನು ವಾಸ್ತವದೊಂದಿಗೆ ಸಮೀಕರಿಸಿ, ಅವು ಸಾಹಿತ್ಯದಲ್ಲಿ ಜೀವತಳೆವಂತೆ ಮಾಡುತ್ತಾನೆ. (ಕವಿ ಕಂಡ ಕನಸು ನಿದ್ರೆ ಮಾಡುವಾಗ ಕಂಡದ್ದಲ್ಲ; ಎಚ್ಚರಿದ್ದಾಗಲೇ ಕಂಡದ್ದು!) ಕವಿಯಾದವನು ಸಾಹಿತ್ಯದೊಳಗೆ, ವಾಸ್ತವದಲ್ಲಿ ಘಟಿಸದ ಘಟನೆಗಳನ್ನು, ಅಪೌರುಷೇಯವಾಗಿ ಘಟಿಸುವ ಘಟನೆಗಳನ್ನು ಹಾಗೂ ತಾನು ಮಂಡಿಸಿದ ವಿಚಾರಗಳು ವಾಸ್ತವದಲ್ಲಿ ಅರಗಿಸಿಕೊಳ್ಳಲಾಗದು ಎನ್ನುವ ಘಟನೆಗಳನ್ನು ಕನಸಿನ ಮೂಲಕ ವ್ಯಕ್ತಪಡಿಸುತ್ತಾನೆ. ಜತೆಗೆ ಕನಸನ್ನು ಒಂದು ತಂತ್ರವಾಗಿ ಬಳಸಿಕೊಳ್ಳುತ್ತಾನೆ. ಆದರೆ ಕನಸುಗಳನ್ನೇ ಕವಿಗಳು ಸಾಹಿತ್ಯದಲ್ಲಿ ಒಂದು ವಸ್ತುವನ್ನಾಗಿ ತೆಗೆದುಕೊಂಡು, ಅದನ್ನೊಂದು ಕಲಾತಂತ್ರವನ್ನಾಗಿ ಮಾಡಿಕೊಂಡಿರುವರೆಂಬ ಸಂಗತಿ ಗಮನಾರ್ಹವಾಗಿದೆ. ಕವಿಗೆ ಬದುಕಿನ ಯಾವೆಲ್ಲ ಅನುಭವಗಳು ವಸ್ತುವಾಗುವಂತೆ, ಸ್ವಪ್ನಗಳೂ ಆತನ ಕಾವ್ಯದ ಸಾಮಗ್ರಿಯಾಗಿ ಬಳಕೆಯಾಗಿದೆ. ಕವಿ ನಿರ್ಮಿತಿಯಲ್ಲಿ ಬಳಕೆಯಾಗಿರುವ ಕನಸುಗಳ ಸಾರಸ್ಯವನ್ನು ಸಂಕ್ಷಿಪ್ತವಾಗಿ ಹೀಗೆ ನೋಡಬಹುದು: ಕವಿತೆ, ಕಾದಂಬರಿ, ಪುರಾಣ, ಕಾವ್ಯ ಹಾಗೂ ಮಹಾಕಾವ್ಯಗಳಲ್ಲೆಲ್ಲಾ, ಕನಸುಗಳು ಮುಖ್ಯವಾಗಿ ಅಂತರಂಗದ ಬಯಕೆಗಳಿಗೆ ಕನ್ನಡಿಯಾಗಿ ಅಥವಾ ಮುಂದಾಗುವುದನ್ನು ಸೂಚಿಸುವ ಭವಿಷ್ಯವಾಣಿಯ ಸಂಕೇತಗಳಾಗಿ ಬಳಕೆಯಾಗಿರುವುದು ಸಾಮಾನ್ಯ ಸಂಗತಿಯಾಗಿದೆ.

ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಸುಮಾರು ಹದಿನಾರು ಕಡೆಗಳಲ್ಲಿ ಸ್ವಪ್ನಗಳ ಪ್ರಸ್ತಾಪ ಬರುತ್ತವೆ. ಅವುಗಳಲ್ಲಿ ಆರು ಸ್ವಪ್ನಗಳು ಮುಖ್ಯವಾದವು ಮತ್ತು ವಿಸ್ತೃತವಾದವುಗಳು. ಮಮತೆಯ ಸುಳಿ ಮಂಥರೆ ಸಂಚಿಕೆಯಲ್ಲಿ ಮಂಥರೆಗೆ ಬೀಳುವ ಕನಸು ಇಡೀ ಕಥೆಗೆ ಮಹತ್ತರ ತಿರುವನ್ನ ತಂದುಕೊಡುತ್ತದೆ. ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಬೇಕೆಂದು, ದಶರಥನು ನಿರ್ಣಯವನ್ನು ಕೈಗೊಂಡ ದಿನ ಕೈಕೆ, ಭರತನಿಗಾಗಿಯೇ ಬದುಕಿದ್ದ ಮಮತೆಯ ಸುಳಿ ಮಂಥರೆಗೆ ಆ ಇರುಳು ಒಂದು ಕನಸು ಬೀಳುತ್ತದೆ, ಅದು ಹೀಗಿದೆ,

> **"**ಮುದುಕಿಯಾದಾ ಕೈಕೆ ಭರತನಂ ಕೈವಿಡಿದು
> ಮರುಧರೆಯನಲೆಯುತಿರ್ದಳ್ ವಿಧವೆಯೋಲ್, ಕುಬ್ಜೆ
> ಮಂಥರೆಗೆ. ಕೇಡದೇನಂ ಸ್ವಪ್ನಮಾಡಿದುದೊ
> ತನಗೆನುತೆ ಚಿಂತಿಸುತ್ತಿರೆ, ಕಿವಿಗೆವಂದುದಯ್
> ನಲಿವ ಮಂಗಳವಾದ್ಯ ಸಂಭ್ರಮಂ**"**

ಈ ಕನಸಿನ ಸಾಂಕೇತಿಕತೆ, ರಾಮನ ಪಟ್ಟಾಭಿಷೇಕದಿಂದ, ಕೈಕೆ ಭರತರಿಗೆ ಎಂತಹ ದುಃಸ್ಥಿತಿ ಒದಗುವುದೆಂದು, ಮಂಥರೆಯ ಮನಸ್ಸು ಕಲ್ಪಿಸಿಕೊಂಡಿತೋ ಅದಕ್ಕೆ ತಕ್ಕುದಾಗಿದೆ. ಬಹುಶಃ ಮಂಥರೆಯು ಈ ಸಮಯದಲ್ಲಿ ತನ್ನ ವರ್ತನೆಯ ಮೂಲಕ ಕೈಕೆಯನ್ನು ಬದಲಾಯಿಸಿ; ದಶರಥ ಎಂದೋ ಕೊಟ್ಟ ವರಗಳನ್ನು ಜ್ಞಾಪಿಸದಿದ್ದರೆ; ಕೈಕೆ ವರಗಳನ್ನೇ ಕೇಳುತ್ತಿರಲ್ಲಿಲ್ಲ. ರಾಮಾಯಣದ ಕಥೆಯೆ ಬೇರೆಯಾಗಿರರುತ್ತಿತ್ತು. ಅಯೋಧ್ಯೆಯಲ್ಲಿ ದಶರಥನೂ ಸಾಯುತ್ತಿರಲ್ಲಿಲ್ಲ; ಲಂಕೆಯಲ್ಲಿ ರಾವಣ ಕುಂಭಕರ್ಣಾದಿಗಳು ಸಾಯುವುದಿರಲಿ; ಕಲ್ಪನೆಗೂ ಬರುತ್ತಿರಲ್ಲಿಲ್ಲವೇನೊ?

ಕೈಕೆ, ಮಂಥರೆಯ ಪ್ರೇರಣೆಯಿಂದ ವರಗಳನ್ನೇನೊ ಪಡೆಯುತ್ತಾಳೆ, ಆದರೆ ತನ್ನ ಸಹಿತ ಎಲ್ಲರನ್ನೂ ದುಃಖದ ಮಡುವಿಗೆ ತಳ್ಳುತ್ತಾಳೆ. ನಿಜವಾಗಿ ಮಂಥರೆಯ ಅಂತರಂಗದೊಳಗೆ ಹುದುಗಿದ್ದ ತಾಯಿ ಮಮತೆ ಹೊರಹೊಮ್ಮುವುದೇ ಇಲ್ಲಿ. ಕುವೆಂಪು ಅವರು ಹೇಳುವಂತೆ: ಮಂಥರೆ ಸೀತೆ ರಾಮ ರಾವಣರೆಲ್ಲರುಂ ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ? ಎನ್ನುವ ಮಾತು ಸತ್ಯ. ರಾವಣನ ಆತ್ಮೋದ್ಧಾರ ಮಾಡಿಸುವ, ಅವನನ್ನು ದುರಂತ ನಾಯಕನನ್ನಾಗಿಸಿ ನಮ್ಮ ಮನದಲ್ಲಿ ಸದಾ ಕರುಣೆಯ ನೆಲೆಯಲ್ಲಿ ನಿಲ್ಲುವಂತೆ ಮಾಡುವ ಹಾಗೂ ರಾಮನ ಮಹತ್ವವನ್ನು ಜಗಕ್ಕೆ ಸಾರುವ; ಮಹತ್ಕಾರ್ಯದ ಮೂಲಬೀಜವೇ ಮಮತೆಯ ಸುಳಿ ಮಂಥರೆ.

ಮಂಥರೆಯಿಂದಾದ ನಾಂದಿಗೆ; ರಾವಣ ಹಿಡಿಯುವ ಹಾದಿ, ಸೀತಾಪಹರಣ. ಸಂಸ್ಕೃತಿ ಲಂಕಾ ಸಂಚಿಕೆಯಲ್ಲಿ ಚಂದ್ರನಖಿಯ ಕಾವಲಿನಲ್ಲಿರುವ ಜಾನಕಿಗೆ ಬೀಳುವ ಕನಸು; ಅವಳ ಮನದಲ್ಲಿ ಹುಟ್ಟಿದ ತಪ್ಪು ಕಲ್ಪನೆಯು ಅವಳಿಗೆ ಅರಿವು ಮಾಡಿಸುತ್ತದೆ. ಚಂದ್ರನಖಿಯ ಕಾವಲಿನಲ್ಲಿದ್ದ ಸೀತೆಯನ್ನು ಲಂಕಾ ಸುಂದರಿಯರು ಸುತ್ತುವರುದು ನರ್ತಿಸಿ, ದೇವೇಂದ್ರ ವೈಭವವನ್ನು ಸೃಷ್ಟಿಸಿದರು. ಆಗ ಸೀತೆಗೆ ಸುಖದ ಕನಸೊಂದು ಬಿತ್ತು: ಅವರು ವನವಾಸವನ್ನು ಮುಗಿಸಿ ಅಯೋಧ್ಯೆಗೆ ಹಿಂದಿರುಗಿದ್ದಾರೆ. ಜನ ಸಂತೋಷದಿಂದ ನಲಿದಿದೆ, ಕುಣಿದಿದೆ. ಎಲ್ಲೆಲ್ಲೂ ಗಾನದಿಂಪು, ಪರಿಮಳದ ಕಂಪು ತುಂಬಿದೆ. ಕೈಕೆ ಊರ್ಮಿಳೆ ಭರತ ಕೌಸಲ್ಯೆಯರ ಆನಂದ ಹೇಳತೀರದು. ಆದರೆ ರಾಮನೆಲ್ಲಿ? ಸೀತೆ ಬೆಚ್ಚಿ ಬೆದರಿ ಅಯ್ಯಯ್ಯೋ ಸೌಮಿತ್ರಿ, ರಾಮನನ್ನು ಕಾಡಿನಲ್ಲಿ ಬಿಟ್ಟು ಬಂದೆವೊ! ಎಂದು ಏಳಲೆಳಸಿ, ಏಳಲಾರದೆ ಕೆಳಗುರುಳಿದಳು. ನಿದ್ರೆ ಸರಿಯಿತು.



ಈ ಕನಸು ಅಂದು ಸೀತೆಯಿಂದಾದ ಅಚಾತುರ್ಯದ ಪಶ್ಚಾತಾಪದಂತಿದೆ. ಪಂಚವಟಿಯಲ್ಲಿ ಸೀತೆ ಮಾಯಾಮೃಗವನ್ನು ನೋಡಿ, ಅದಕ್ಕೆ ಮರುಳಾಗಿ ಅದು ಬೇಕೆಂದು ರಾಮನನ್ನು ಕೇಳುತ್ತಾಳೆ. ರಾಮ–ಲಕ್ಷ್ಮಣರು ಅದು ಮಾಯೆ ಎಂದು ಎಷ್ಟು ಹೇಳಿದರೂ ಕೇಳುವುದಿಲ್ಲ. ಶ್ರೀರಾಮ ಮಾಯಾಮೃಗದ ಬೆನ್ನಟ್ಟಿ ಹೋಗಿ ಹೊಡೆದಾಗ, ಮಾರೀಚ ರಾಮನ ಧ್ವನಿಯಲ್ಲಿ ಚೀರುತ್ತಾನೆ. ಅದನ್ನು ಕೇಳಿದ ಸೀತೆ, ರಾಮ ಅಪಾಯದಲ್ಲಿದ್ದಾನೆಂದು ಭಾವಿಸಿ, ಲಕ್ಷ್ಮಣನಿಗೆ ಸಹಾಯಕ್ಕೆ ಹೋಗುವಂತೆ ಹೇಳುತ್ತಾಳೆ. ಆದರೆ ಅದು ರಾಕ್ಷಸನ ಮಾಯೆಯೆಂದು ಅರಿತಿದ್ದ ಲಕ್ಷ್ಮಣ, ಸೀತೆಯ ಮಾತನ್ನು ನಿರಾಕರಿಸುತ್ತಾನೆ; ಜತೆಗೆ ಅವಳನ್ನು ಸಮಾಧಾನಪಡಿಸಲು ಯತ್ನಿಸುತ್ತಾನೆ. ಆದರೆ ಸೀತೆ, ಅವನ ಮೇಲೆ ಇಲ್ಲದ ಆಪಾದನೆ ಮಾಡುತ್ತಾಳೆ. ವಿಧಿಯಿಲ್ಲದೆ ಲಕ್ಷ್ಮಣ ತೆರಳುತ್ತಾನೆ. ಆದರೆ ಅದರ ಫಲವನ್ನು ತನ್ನೊಂದಿಗೆ ಎಲ್ಲರು ಅನುಭವಿಸುವಂತೆ ಮಾಡುತ್ತಾಳೆ. ಅಂದು ಅವಳಲ್ಲಿ ಮೂಡಿದ ತಪ್ಪು ಕಲ್ಪನೆಯೆ ಈಗ ಕನಸಿನ

ರೂಪದಲ್ಲಿ ಅರಿವಾಗಿದೆ ಎನಿಸುತ್ತದೆ. ಈ ಸ್ವಪ್ನವೆ ಸೀತೆಯನ್ನ ನಿತ್ಯತಪಸ್ವಿನಿಯನ್ನಾಗಿ ಮಾಡುತ್ತದೆ.

ಸೀತೆ ಅಶೋಕ ವನದಲ್ಲಿರುವಾಗ ಅವಳ ಕಾವಲು ಕಾಯುತ್ತಿದ್ದ ತ್ರಿಜಟೆಗೆ, ಒಂದು ದಿನ ಸೀತೆಗೆ ಶುಭವಾಗುವಂತೆ ಸ್ವಪ್ನ ಬೀಳುತ್ತದೆ. ತ್ರಿಜಟೆ ಆ ಕನಸನ್ನ ಸೀತೆಗೆ ಹೇಳುತ್ತಾಳೆ: ಪುಣ್ಯೆ, ಆ ಶುಭ ಶಕುನವನ್ನು ನೆನೆದರೆ ರೋಮಾಂಚನವಾಗುತ್ತದೆ. ಒಂದು ಸರೋವರ. ಅದರಲ್ಲಿ ಸಹಸ್ರದಲಗಳ ತಾವರೆಗಳೆರಡು. ಒಂದು ನೀಲವರ್ಣ; ಮತ್ತೊಂದು ಕನಕವರ್ಣ. ತಂಗಾಳಿ ತೀಡುತ್ತಿತ್ತು. ತುಂಬಿ ಝೇಂಕರಿಸುತ್ತಿತ್ತು. ಇದ್ದಕ್ಕಿದ್ದಂತೆ ನೀರನ್ನು ಕದಡುತ್ತ ಮೊಸಳೆಯೊಂದು ಮೇಲೆದ್ದಿತು. ಮೆಲ್ಲಮೆಲ್ಲನೆ ಕನಕ ತಾವರೆಯ ಹತ್ತಿರ ಸರಿದು ಮೂಗರಳಿಸಿ ಅದರ ಕಂಪನ್ನು ಮೂಸತೊಡಗಿತು. ಹೂವು ನಡುಗಿತು. ಒಡನೆಯೇ ಹೂಕುಡಿಯುತ್ತಿದ್ದ ದುಂಬಿಗಳು ಎದ್ದು ಝೇಂಕರಗೈಯುತ್ತ ಅದರ ಮೇಲೆ ಬಿದ್ದು ಕೊಂಡಿಯಿಂದ ಚುಚ್ಚಿ ಅದನ್ನು ಕೊಂದವು. ಅದರ ಶವ ನನ್ನೆಡೆ ತೇಲಿಬರಲು ಅದರಲ್ಲಿ ರಾವಣನ ಕಳೇಬರವನ್ನು ಗುರುತಿಸಿ ಬೆಚ್ಚಿದೆನು. ನೈದಿಲೆಯನ್ನಪ್ಪಿಕೊಂಡು ತಾವರೆಯಲ್ಲಿದ್ದ ನಿನ್ನನ್ನು ಕಂಡು ಅಚ್ಚರಿಗೊಂಡೆನು. ಕಣ್ದೆರೆದು ನೋಡಿದೆ. ನೀನು ಪದ್ಮಾಸನಳಾಗಿ ಧ್ಯಾನನಿರತಳಾಗಿದ್ದೆ.

ಇಲ್ಲಿ ತ್ರಿಜಟೆ ಕಂಡ ಕನಸು ಮನಃಪರಿವರ್ತನೆಯೂ ಹೌದು; ರಾವಣನ ಭವಿಷ್ಯ ಸಂಕೇತವೂ ಹೌದು. ಈ ಎರಡೂ ವಿಷಯಗಳನ್ನು ಕುರಿತು ವಿವೇಚಿಸುದಾದರೆ: ಸ್ವಭಾವತಃ ರಾಕ್ಷಸಿಯಾದ ತ್ರಿಜಟೆಯ ಮನಸ್ಸು ಈ ಕನಸಿನಿಂದಾಗಿ ಪರಿವರ್ತನೆಯಾಗಿದೆ. ಇಲ್ಲಿ ತ್ರಿಜಟೆ ರಾವಣನಿಂದ ನೊಂದ ಸೀತೆಯನ್ನು ಸಮಾಧಾನಿಸುತ್ತಾಳೆ ಹಾಗೂ ಜಾನಕಿಗೆ ಒಳಿತಾಗುವುದೆಂದು ನಂಬಿದ್ದಾಳೆ. ಹಾಗಂತ ಹೇಳಿ ಇವಳಿಗೆ ಸ್ವಾಮಿನಿಷ್ಠೆ ಇಲ್ಲ ಎಂದು ಹೇಳುವಂತೆಯೂ ಇಲ್ಲ; ಏಕೆಂದರೆ ರಾವಣನ ಸ್ಥಿತಿಗೆ ಇವಳೂ ಮರುಗುತ್ತಾಳೆ. ಮತ್ತು ಅವನ ಮನಃಪರಿವರ್ತನೆಗೆ ಪ್ರಾರ್ಥನೆಗೈಯುತ್ತಾಳೆ. ಇಲ್ಲಿಯ ತನಕ ತ್ರಿಜಟೆಯೊಂದಿಗೆ ಬೆರೆಯದಿದ್ದ ಸೀತೆ, ಈ ಕನಸ್ಸನ್ನು ಕೇಳಿದ ಮೇಲೆ ಅವಳೊಂದಿಗೆ ಮುಕ್ತವಾಗಿ ಬೆರೆಯುತ್ತಾಳೆ. ಅಂತೆಯೇ ಇಬ್ಬರೂ ತಾಯಿ–ಮಗಳಂತಾಗುತ್ತಾರೆ. ರಾವಣನ ಮನಃಪರಿವರ್ತನೆಗೆ ಸೀತೆಯ ಪ್ರಾರ್ಥನೆಯೂ ಇದೆ; ಹಾಗೆಯೆ ಅವನ ದುಃಸ್ಥಿತಿಗೆ ಮರುಕವೂ ಇದೆ. ಇಲ್ಲಿ ರಾವಣನ ಅಂತ್ಯದ ಮನ್ಸೂಚನೆಯೂ ಇದೆ. ಈ ಸ್ವಪ್ನ ಸೀತೆಯಲ್ಲಿ, ರಾಮನನ್ನು ಸೇರುವ ಸಂತೋಷವನ್ನು; ಮಂಡೋದರಿಯ ಭವಿಷ್ಯದ ಸ್ಥಿತಿಯನ್ನು ನೆನೆದು ದುಃಖವನ್ನು ಹೆಚ್ಚಿಸುತ್ತದೆ.

ಅದ್ವಿತೀಯಮಾ ದ್ವಿತೀಯಂ ದಿನಂ ಸಂಚಿಕೆಯಲ್ಲಿ ರಾವಣನಿಗೆ ಮತ್ತು ಅನಲೆಗೆ ಬೀಳುವ ಕನಸುಗಳು ವಿಶಿಷ್ಟವಾದವು. ರಾವಣ ಕಂಡ ಕನಸು, ಅವನ ಕಾಮದ ವಿರುದ್ಧ ಜಯದ ಮೆಟ್ಟಿಲನ್ನೇರಹೊರಟರೆ, ಅನಲೆ ಕಂಡ ಸ್ವಪ್ನ ಮನುಷ್ಯ ಜೀವನದ ಸುಖ–ದುಃಖದ ಚಲನೆಯನ್ನು, ರಾವಣನ ಆತ್ಮೋದ್ಧಾರದ ಮುನ್ನುಡಿಯನ್ನು ಸೂಚಿಸುತ್ತದೆ.

ಲಂಕೆಯಲ್ಲಿ ಯುದ್ಧದ ಎರಡನೇ ದಿನ; ರಾವಣನ ಮನದಲ್ಲಿ ಕಾಮದ ವಿರುದ್ಧ ಆಧ್ಯಾತ್ಮದ ಯುದ್ಧವೂ ಪ್ರಾರಂಭವಾಗಿದೆ. ಕ್ರಮಕ್ರಮವಾಗಿ ರಾವಣನಿಗೆ ಸೀತೆಯಲ್ಲಿದ್ದ ಕಾಮತ್ವಗುಣ ಕಡಿಮೆಯಾಗಿ, ಮಾತೃತ್ವಗುಣ ಬೆಳೆಯಲು ಪ್ರಾರಂಭವಾಗಿದೆ. ರಾವಣನಿಗೆ ಮುಂದೊದಗಬಹುದಾದ ಮಹದ್ ಘಟನೆಯೊಂದರ ಮೂಲ ಇಲ್ಲಿ ಮೊಳಕೆಯೊಡೆಯುತ್ತದೆ. ಅದು ರಾವಣನ ಕನಸಿನಲ್ಲಿ ಹೀಗೆ ವ್ಯಕ್ತವಾಗುತ್ತದೆ: ರಾಣಿ, ನೆನ್ನೆಯ ರಾತ್ರಿ ನನಗೆ ಒಂದು ಕನಸಾಯಿತು. ನಿರ್ಭಾಗ್ಯಳಾದ ವೇದವತಿಯು ಚಿತೆಗೇರಿದ ಆ ಭೀಕರ ದೃಶ್ಯವನ್ನು ಪುನಃ ನೋಡಿದೆನು. ಆ ಸುಂದರಿಯ ಸುಂದರ ಶರೀರವು ಕಣ್ಣ ಮುಂದೆ ಉರಿದು ಬಿಳಿಯ ಬೂದಿಯ ರಾಶಿಯಾಯಿತು. ನಾನು ಅದನ್ನು ನೋಡುತ್ತಿರಲು ಒಂದು ತಿಳಿಗಾಳಿಯು ಆ ಬೂದಿಯನ್ನು ಮೆಲ್ಲಗೆ ಹಾರಿಸಿತು. ಕೆದರಿದ ಆ ಮೃತ ಭಸ್ಮರಾಶಿಯಲ್ಲಿ ಕವಿರಚಿತ ರಮಣೀಯವಾದ ಒಂದು ಅಮೃತ ಮೂರ್ತಿಯು ನಿಧಾನವಾಗಿ ಗೋಚರಿಸಿತು. ಅದರಲ್ಲಿ ಈ ಮಹಾತಪಸ್ವಿನಿಯಾದ ಸೀತೆಯನ್ನು ಗುರುತಿಸಿದೆನು. ಕಾರಣವು ತಿಳಿಯಿತು. ನಡುಗಿ ಕಣ್ಣು ತೆರೆದು ಏಳಲು ಬೆವರಿದ್ದ ಮೈಯನ್ನು ನೋಡಿ ಸ್ವಪ್ನದ ಚೇಷ್ಟೆಗೆ ನನ್ನಲ್ಲಿ ನಾನೇ ನಕ್ಕೆನು. ಸುಳ್ಳು ಕನಸಿನ ಅನುಮಾನವನ್ನು ನಿವಾರಿಸಿಕೊಳ್ಳಲು ಹೋಗಿ ಆ ಜನಕಜಾತೆ ಸೀತೆಯನ್ನು ನೋಡಿದೆನು. ಆ ಕೃಶಳಾದವಳನ್ನು ನೋಡಿ ನನ್ನ ಅನುಮಾನವು ಕಳೆಯಿತು. ಇವಳೆಲ್ಲಿ? ಅವಳೆಲ್ಲಿ? ಬುದ್ಧಿಯು ನಿದ್ರಿಸುವಾಗ ಮೃದುವಾದ ಮೆದುಳು ಈ ವಿಕಾರಗಳನ್ನು ಬಡಿದೆಬ್ಬಿಸುತ್ತದೆ. ಮೊದಮೊದಲು ರಾವಣ ತನ್ನಲ್ಲಿ ಉಂಟಾಗುತ್ತಿದ್ದ ಬದಲಾವಣೆಯನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾನೆ. ಮಂಡೋದರಿ ರಾವಣನ ಒಳಮನಸಿನಂತೆ ಬುದ್ಧಿಯನ್ನು ಹೇಳುತ್ತಾಳೆ, ರಾವಣ ಅವಳ ಮಾತನ್ನು ಕೇಳುವುದಿಲ್ಲ; ಆದರೆ ಈ ಸ್ವಪ್ನ ಅವನ ಬದಲಾವಣೆಯ ಮುನ್ನುಡಿಯಾಗುತ್ತದೆ.

ವೇದವತಿ (ವೇದವತಿಯ ಮರುಜನ್ಮವೇ ಸೀತೆ ಎಂದು ಪುರಾಣ ಕಾವ್ಯಗಳು ಚಿತ್ರಿಸಿವೆ.) ಚಿತೆಗೇರಿದಂತೆ, ರಾವಣನಿಗೆ ಸೀತೆಯಲ್ಲಿದ್ದ ಕಾಮತ್ವವೂ ಚಿತೆಗೇರುತ್ತದೆ. ಶ್ವೇತ ವರ್ಣದ ಬೂದಿ ರಾಶಿಯಿಂದೆದ್ದ ಸೀತೆ ರಾವಣನಿಗೆ ಮಾತೆಯಾಗಿ ಕಾಣುತ್ತಾಳೆ. ರಾವಣನ ಕನಸಿನ ಜಾಗೃತಿಗೆ ಮುಂದಿನ ಭಾಗವಾಗಿ ಅನಲೆಯ ಕನಸು ಎಣೆದುಕೊಳ್ಳುತ್ತದೆ. ಅವಳ ಕನಸು ಅತಿಶಯವಾದದು. ತ್ರಿಜಟೆ ತನ್ನ ಕೆಲಸವನ್ನು ಮುಗಿಸಿ ಮಲಗಿದಳಂತೆ. ದೇವಿ ಕಣ್ಣುಮುಚ್ಚದೆ ಯೋಗಿನಿಯಂತೆ ಅಂತರ್‌ಮುಖಿಯಾಗಿ ಕುಳಿತಿದ್ದಳಂತೆ. ಮಹಾಜ್ಯೋತಿಯೊಂದು ಪರ್ಣಶಾಲೆಯನ್ನೆಲ್ಲ ತುಂಬಿದಂತಾಯಿತಂತೆ. ಅನಲೆ ಪುಳಕಿತಳಾಗಿ ನೋಡಿತ್ತಿರಲು ಸೀತೆ ಯಾರೊಡನೆಯೊ ಮಾತನಾಡುತ್ತಿದ್ದಂತೆ ಕಾಣಿಸಿತಂತೆ. ಆ ಪೂಜೆ ಅಲ್ಲಿದ್ದರೂ ಎಲ್ಲೆಲ್ಲಿಯೂ ಚರಿಸುತ್ತಿದ್ದಂತೆ, ಸರ್ವವನ್ನೂ ಕಾಣುತ್ತಿದ್ದಂತೆ, ಅಲ್ಲಿ ತಾಟಸ್ಥ ಸ್ಥಿತಿಯಲ್ಲಿದ್ದರೂ ಸೃಷ್ಟಿಚಕ್ರವನ್ನೆ ತಿರುಗಿಸುತ್ತಿದ್ದಂತೆ ಗೋಚರಿಸಿದಳಂತೆ. ಆ ದೃಶ್ಯವನ್ನು ಕಂಡು ಭಯಭೀತಳಾಗಿ ಅನಲೆ ಮಯ್ಮರೆತಳಂತೆ. ಹೀಗೆ ಮಂಡೋದರಿ ರಾವಣನಿಗೆ, ಅನಲೆ ಕಂಡ ಸ್ವಪ್ನದ ಮಹತ್ವವನ್ನ ವಿವರಿಸುತ್ತಾಳೆ.

ಶ್ರೀರಾಮಾಯಣ ದರ್ಶನಂನಲ್ಲಿ ಮುಂದೊದಗಬಹುದಾದ ರಾವಣನ ಆತ್ಮೋದ್ಧಾರಕ್ಕೆ, ಪ್ರತೀಕವಾಗಿ ಕಾಣಿಸಿಕೊಳ್ಳುವ ಈ ಮುಂದಿನ ಕನಸು; ಸರ್ವೋದಯ, ಪೂರ್ಣದೃಷ್ಟಿ ತತ್ವಗಳನ್ನು ಪ್ರತಿಪಾದಿಸುತ್ತದೆ. ಇಲ್ಲಿ ರಾವಣನ ಸ್ವಪ್ನಸಿದ್ಧಿಗಾಗಿಯೇ ಅಲ್ಲ; ಮಹಾಕಾವ್ಯದ ಸ್ವಪ್ನಸಿದ್ಧಿಗಾಗಿಯೂ ತಂದಿರಿಸಿದ ಸಂಚಿಕೆಯಂತಿದೆ ಶ್ರೀರಾಮಾಯಣ ದರ್ಶನಂನ ದಶಾನನ ಸ್ವಪ್ನಸಿದ್ಧಿ.

ಕೃಷ್ಣಪಕ್ಷದ ಚತುರ್ದಶಿಯ ನಡುರಾತ್ರಿ, ಶ್ರೀರಾಮನ ಚಿತ್ತಪಶ್ಶಕ್ತಿಯ ಅಗ್ನಿಜ್ವಾಲೆಯಲ್ಲಿ ರಾವಣನ ಮೂಲಬಲದ ಬಹುಭಾಗ ನಿರ್ನಾಮವಾಯಿತು. ದುರ್ಗಿಯನ್ನು ತಣಿಸಿ ಶತೃನಾಶಕ ವರಗಳನ್ನು ಪಡೆಯುವ ಸಂಕಲ್ಪವನ್ನು ತೊಟ್ಟು ರಾವಣ ಶರ್ವಮಂದಿರವನ್ನು ಹೊಕ್ಕು ಪೂಜಾನಿರತನಾದನು. ಶಿವನೆದೆಯ ವೇದಿಕೆಯನ್ನೇರಿ, ನಾಲಗೆಯಲ್ಲಿ ರಕ್ತವನ್ನು ಕಾರಿ, ರುಂಡಮಾಲೆಯ ಕಂಠಾಭರಣದಿಂದ, ನರಕರಗಳಿಂದ ವಿರಚಿತವಾದ ಕಟಿಯ ಅಲಂಕಾರದಿಂದ ಭೀಕರಾಯುಧ ಪಾಣಿ, ಅಸ್ತವ್ಯಸ್ತ ವೇಣಿ, ಜಗನ್ಮಾತೆ, ಸೃಷ್ಟಿ ಸ್ಥಿತಿ, ಪ ್ರಲಯ ಶೀಲೆ, ಕಾಳಿ ಕರಾಳಿ ನಾಟ್ಯಭಂಗಿಯಲ್ಲಿ ವಿರಾಜಿಸುತ್ತಿದ್ದಳು. ತನ್ನ ಅಭೀಷ್ಟ ಸಿದ್ಧಿಗಾಗಿ ರಾವಣ ತನ್ನಿಷ್ಟ ದೇವತೆ ಕಾಳಿಕಾ ಮೂರ್ತಿಯನ್ನೇ ನಟ್ಟುನೋಡುತ್ತ

ಸಾಕ್ಷಾತ್ಕಾರಕ್ಕಾಗಿ ಸಮಯ ಕಾಯುತ್ತಿದ್ದನು. ದಶಶಿರನ ದೃಷ್ಟಿ ಗ್ರಹ ಬಾಡಿದಂತೆ ಸೃಷ್ಟಿಯೂ ಉತ್ಕಂಠ ಭೀತಿಯಿಂದ ನಿಂತಿತ್ತು. ಆ ದೈತ್ಯ ಭಕ್ತನ ಭೀಷ್ಮ ಭಕ್ತಿಯನ್ನು ಮೆಚ್ಚಿ ಇನ್ನೇನು ಜಗದಂಬೆ ಪ್ರತ್ಯಕ್ಷವಾಗಬೇಕು ಅಷ್ಟರಲ್ಲಿ 'ತಾಳು, ತಾಳು ತಾಯಿ, ನೀನೀಗ ಇವನಿಗೆ ಮೈದೋರಿದರೆ ಧರ್ಮ ನಾಶನಾರ್ಥವಾಗಿ ವರಗಳನ್ನು ಕೇಳುತ್ತಾನೆ' ಎಂದು ಗಗನದಲ್ಲಿ ದೇವತೆಗಳು ಒರಲಿದರು. ದೇವಿಯ ಮನಸ್ಸು ಇಬ್ಬಗೆಯಾಗಿ ತುಸು ತಡೆದು ದೇವತೆಗಳನ್ನು ಸಂತೈಸಿದಳು. ತಡವಾದುದೇ ಕೋಪ ಕಾರಣವಾಗಲು ರಾವಣ ಖಡ್ಗವನ್ನು ತುಡುಕಿ 'ಏಕೆ ತಡ, ತಾಯಿ? ಭಕ್ತನ ಪರೀಕ್ಷೆ ಸಾಲದೆ? ಹೂ ಹಣ್ಣುಗಳ ಬಲಿ ಎಟಕದಿದ್ದರೆ ಹತ್ತರತನಕ ಒಂದಾದ ಮೇಲೊಂದು ಮೂಡುವ ’ ತಲೆಗಳನ್ನು ಕತ್ತರಿಸಿ ನಿವೇದಿಸಿಕೊಳ್ಳುತ್ತೇನೆ ಸ್ವೀಕರಿಸು ಎಂದನು. ಶಿವಮಂದಿರದೊಡನೆ ಶಿಲಾಮೂರ್ತಿಯೂ ಕಂಪಿಸಿತು. ಆ ದರ್ಶನವನ್ನು ನೋಡಲಾರದೆ ರಾವಣ ಸ್ವಪ್ನ ಸಮಾಧಿಯಲ್ಲಿ ತನ್ನನ್ನು ತಾನು ಮರೆತು ಕನಸನ್ನು ಕಾಣುತ್ತಾನೆ. ರಾವಣ ಒಬ್ಬ ಭಕ್ತ, ಅಷ್ಟೊಂದು ಕ್ರೂರವಾದ ಮನಸ್ಸಿಲ್ಲದವನು, ಮಾತುಗಳು ಒರಟಾದರೂ ಮೃದು ಮನಸ್ಸಿನವನು ಎಂದು ತ್ರಿಜಟೆ ರಾವಣ ಕಾಮುಕನಾದರೂ ತನಗೆ ಸೋಲದವರನ್ನು ಮುಟ್ಟನು, ಕಠಿಣನಾದರೂ ಅಸಂಸ್ಕೃತನಲ್ಲ, ಹೆಂಗಸಿನ ಮಾತನ್ನು ಮೀರಿ ಕೂಡುವ ಹೇಡಿಯಲ್ಲ, ಅವನು ಯಾವಾಗಲೂ ಪುರುಷಶಾಲಿ ಅಹುದು ಎಂದು ಹೇಳುತ್ತಾಳೆ. ಸೀತೆಯನ್ನೇನೋ ಕದ್ದು ಹೊತ್ತು ತಂದ ನಿಜ, ಮೋಹಿಸಿದ್ದೂ ಅವಳೊಡನೆ ಕೂಡಬೇಕೆಂದು ಬಯಸಿದ್ದೂ ನಿಜ, ನನ್ನನ್ನು ವರಿಸದವರು ಮೂಜಗದಲ್ಲಿದ್ದಾರೆಯೇ? ಎಂದು ಅಹಂಕಾರದಿಂದ ಮೆರೆದಿದ್ದು ನಿಜ. ಆದರೆ ಸೀತೆಯ ಮನಸ್ಸನ್ನು ಗೆಲ್ಲಲಾಗದೇ ದಿನೇ ದಿನೇ ತಾನೇ ಸೋಲುವಂತ ಸ್ಥಿತಿಗೆ ಬರುತ್ತಾನೆ. ಇದನ್ನು ತನ್ನ ತಂಗಿಯಾದ ಚಂದ್ರನಖಿಯೊಡನೆ ಮಾತನಾಡುವಾಗ ಹೇಳುತ್ತಾನೆ. ಸೀತೆಯ ಸೌಮ್ಯ ಸ್ವಭಾವವು ರಾಕ್ಷಸಿಯಾದ ಶೂರ್ಪನಖಿಯನ್ನು ಚಂದ್ರನಖಿಯನ್ನಾಗಿ ಮಾಡುತ್ತದೆ, ಅವಳು ತನ್ನ ಅಂದಿನ ಕೃತ್ಯಕ್ಕೆ ಮರಗುತ್ತಾಳೆ, ಅಣ್ಣನ ಬಳಿ ಬಂದು ಸೀತೆಯನ್ನು ದಾಶರಥಿಗೊಪ್ಪಿಸುವ ತನ್ನ ಬಯಕೆಯನ್ನು ಹೇಳುತ್ತಾಳೆ, ಅಣ್ಣನು ತಿರಸ್ಕರಿಸಿದುದನ್ನು ತಡೆದು 'ಈಗ ನಿನ್ನಂತರಾತ್ಮವನ್ನು ಬಿಚ್ಚಿ ಹೇಳು ಸೀತೆಯಲ್ಲಿ ಹಿಂದೆ ಇದ್ದ ಕಾಮರುಚಿ ಇನ್ನೂ ಉಳಿದಿದೆಯೇ? ಆ ಪಂಚವಟಿ ಸೀತೆಯಂತೆ ಈ ಅಶೋಕವನವಾಸಿ ತಪಸ್ವಿನಿ ನಿರಶನವ್ರತೆ, ಮಲಿನವಸನೆ ಸೀತೆ ನಿನ್ನ ಮೋಹವನ್ನು ಕೆರಳಿಸುತ್ತಾಳೆಯೇ? ಎಂದಾಗ ರಾವಣನು 'ನೀನು ಹೇಳಿದ್ದೆಲ್ಲವೂ ನಿಜ ಸೀತೆಯಲ್ಲಿ ನನಗೆ ಕಾಮರುಚಿಯಿಲ್ಲ, ಇಂದಿನ ಸೀತೆ ಅಂದಿನ ಸೀತೆಯಾಗಿಲ್ಲ, ಆದರೆ ಅವಳಿಗಿಂತ ಇವಳಲ್ಲಿ ಗಾಢ ಮೋಹ ಹುಟ್ಟಿದೆ, ಅವಳನ್ನು ತೊರೆದೆ, ಇವಳನ್ನು ಎಂದಿಗೂ ಬಿಡೆನು, ಚಂದ್ರನಖಿ ಹಿಂದಿನ ಕಥೆಯನ್ನು ಹೇಳುತ್ತೇನೆ ಕೇಳು, 'ಮಾರೀಚನನ್ನು ಕಂಡು ಕನಕಮೃಗ ರೂಪದಿಂದ ಸೀತೆಯನ್ನು ವಂಚಿಸೆಂದು ಹೇಳಿದಾಗ ಅವನು ಹದಿಬದೆಯ ಮಹಿಮೆಯನ್ನು ಕುರಿತು ಕೊಂಡಾಡಿದ್ದನು, ಚಂದ್ರನಖಿ ಈಗ ನಾನು ಧನ್ಯನಾಗುವ ಹೊತ್ತು ಸಮೀಪಿಸುತ್ತಿರುವಂತೆ ತೋರುತ್ತಿದೆ. ಪುಣ್ಯ ಯೋಗವಿದ್ದರೆ, ಬದುಕಿದ್ದರೆ ನೀನೂ ಆ ದಿವ್ಯದೃಶ್ಯವನ್ನು ನೋಡಬಹುದು. ಎವೆಯಿಕ್ಕದೆ, ಒಳಗಣ್ಣಿನಿಂದ ಆ ದೃಶ್ಯವನ್ನು ನೋಡುವಂತೆ ರಾವಣ ತನ್ನ ದೃಷ್ಟಿಯನ್ನು ನೆಟ್ಟಾಗ ಮುಖದ ಮೇಲೆ ಮುಗುಳುನಗೆ ಮಿಂಚಿತು. ಮತ್ತೆ ತಂಗಿಯನ್ನು ಕುರಿತು ಅದೆಂಥ ದಿವ್ಯದೃಶ್ಯ ಇಲ್ಲಿಯತನಕ ಮೂರು ಲೋಕಗಳೂ ಕಂಡರಿಯದಂತೆ ಯುದ್ಧವನ್ನೆಸಗಿ ಶ್ರೀರಾಮನನ್ನು ಗೆದ್ದು ಸೆರೆಯಿಡಿದು ತಂದು ಲಂಕೇಶ್ವರನ ಗರ್ವವನ್ನು ಮುರಿದ ಮೈಥಿಲಿಗೆ ಕಪ್ಪವೊಪ್ಪಿಸುವ ದಿವ್ಯದೃಶ್ಯವದು. ಅಣ್ಣನ ಮಾತುಗಳನ್ನು ಕೇಳಿ ಚಂದ್ರನಖಿಯು ಪುಳಕಿತಳಾಗುತ್ತಾಳೆ.

ಇಂಥ ಮನಸ್ಥಿತಿಯನ್ನು ಪಡೆದ ಮುನ್ನಿನ ಮನಸು ಲಕ್ಷ್ಮಣನ ಖಡ್ಗಾಘಾತದಿಂದ ಹಾಗೂ ಪ್ರಣಯ ನಿರಾಶೆಯಿಂದ ಕೆರಳಿದ ಚಂದ್ರನಖಿಯ ಮಾತನಲ್ಲಿತ್ತು, ತನ್ನ ಪತ್ನಿ ಮಂಡೋದರಿಗೆ ಆ ಆನಕಜಾತೆ ಸೀತೆಯನ್ನು ತಂದು ನಿನಗೆ ದಾಸಿ ಮಾಡುತ್ತೇನೆ, ಸ್ವಯಂವರದ ಕಥೆ ನಿನಗ ’ ನೆನಪಿದೆಯಲ್ಲವೆ? ಮತ್ತೆ ಬಂದು ಹರಕೋದಂಡವನ್ನು ಮುರಿಯುತ್ತೇನೆಂದು ಶಪಥ ಮಾಡಿ, ತಪಸ್ಸಿನಲ್ಲಿ ರುದ್ರನನ್ನು ಒಲಿಸಿಕೊಂಡು ವರವನ್ನು ಪಡೆದೆ. ಅಷ್ಟರಲ್ಲಿ ಜನಕ ರಾಮನಿಗೆ ಸೀತೆಯನ್ನು ಧಾರೆಯೆರ 'ದ ’ ಎಂಬ ವಾರ್ತೆ ಬಂತು, ನಾವು ರಾಕ್ಷಸರಂತೆ ನಮ್ಮ ಲಲನೆಯರಿಗೆ ಕೋರೆಗಳಿವೆಯಂತೆ, ನಾವು ನರರ ’ ಬಿಸಿ ರಕ್ತ ಕುಡಿಯ 'ುತ್ತೇವಂತೆ, ನಮ್ಮಲ್ಲಿ ಸಂಸ್ಕೃತಿಯು ಲವಲೇಶವೂ ಇಲ್ಲವಂತೆ, ರಾಕ್ಷಸ ಕುಲದ ನಮ್ಮನ್ನು ನಿಜವಾಗಿಯೂ ರಾಕ್ಷಸರೆಂದೇ ತಿಳಿದಿದ್ದಾರಂತೆ, "ಸೀತೆಗಾಗಿ ಅರ್ಜಿಸಿದ ತಪಶ್ಶಕ್ತಿಯನ್ನು ಸೀತೆಗಾಗಿಯೇ ವ್ಯಯಿಸುತ್ತೇನೆ" ಎಂದು ಪತಿಯ ಮಾತನ್ನು ಕೇಳಿ ಮಂಡೋದರಿ ನಿಟ್ಟುಸಿರು ಬಿಟ್ಟು ಕಂಬನಿ ಮಿಡಿದಳು. ನಂತರ ತಂಗಿಯು ಮೊಳಸಿದಂತೆ ಸೀತೆಯ ಸೌಂದರ್ಯವನ್ನು ಮತ್ತೆ ಮತ್ತೆ ಮೆಲಕು ಹಾಕಿ ಚಪ್ಪರಿಸಿದನು. ಸೀತೆಯನ್ನು ಪಡೆಯಲೇಬೇಕೆಂದು ನಿರ್ಧರಿಸಿದನು, ದರೀದ್ರನು ಧನವನ್ನು ಪಡೆದಂತೆ, ಹೊಟ್ಟೆಗಿಲ್ಲದವನು ಭಕ್ಷ್ಯಭೋಜ್ಯಗಳ ರಾಶಿಯನ್ನು ಕನಸಿನಲ್ಲಿ ಕಂಡಂತೆ ರಾವಣನಿಗಾಗಿತ್ತು. ರಾವಣನು ಸೀತೆಯ ಜೊತೆಗಿನ ಸನಿಹವನ್ನು ಬಯಸಿದ್ದನು. ಅದು ಅನುಭವ, ಸ್ಪರ್ಶ, ರುಚಿ, ವಾಸನೆ, ಭಾವನೆಗಳಿಂದ ಕೂಡಿದ ದೃಶ್ಯಗಳ ಸರಮಾಲೆಯ ಕನಸಿನಂತೆ ಇಲ್ಲಿ ವ್ಯಕ್ತಿ ಜೀವಂತವಾಗಿ ಕನಸಿನಲ್ಲಿ ಅನುಭವಿಸುತ್ತಾನೆ, ದೇಹದ ಪ್ರತಿಯೊಂದು ಅಂಗಾಂಗ ಕನಸಿನ ಅನುಭವಕ್ಕೆ ಸಂಧಿಸುತ್ತದೆ. ಚಂದ್ರನಖಿಗ ’ ಖಡ್ಗಾಘಾತವಾದಕ್ಕಿಂತ ಹೆಚ್ಚಾಗಿ ಹರಕೋದಂಡವನ್ನು ಎತ್ತಲು ತಪಸ್ಸನ್ನಾಚರಿಸಿ ಒಲಿಸಿಕೊಳ್ಳುವೆನೆಂಬ ಆಸೆಯು ಫ್ರಾಯ್ಡ್ ಹೇಳುವಂತೆ 'ಬಯಕೆಯ ಭಂಡಾರದಂತೆ ಅನುಭವವು ವ್ಯಕ್ತಿಯ ಕನಸಿನಲ್ಲಿ ಬರುವಂತೆ ಸೀತೆಯು ಅವನ ಸ್ಮೃತಿಪಟಲದಲ್ಲಿ ಶಾಶ್ವತವಾಗಿ ಬಂದು ಬಿಟ್ಟಿದ್ದಳು. ತಂಗಿ ಚಂದ್ರನಖಿಯು ಹೇಳಿದ ಸೀತೆಯ ಸೌಂದರ್ಯವು ನೇರವಾಗಿ ಅಥವಾ ಪರೋಕ್ಷವಾಗಿ ರಾವಣನ ಮನಸ್ಸಿನಲ್ಲಿ ಪ್ರತಿಬಿಂಬಿಸುವ ಕನಸಿನಂತೆ ಅವನ ಮನೋವ್ಯಾಪಾರವನ್ನು ತಿಳಿಯಬಹುದಾಗಿದೆ. ಜಾಗೃತಾವಸ್ಥೆಯ 'ೆ ಜೀವನದಲ್ಲಿ ಇರುವ ಸವಾಲುಗಳು ಮತ್ತು ಅವಕಾಶಗಳನ್ನು ತಯ 'ಾರು ಮಾಡುವ ಕನಸಿನಂತೆ ಸೀತೆಯನ್ನು ಪಡೆಯುವ ಆಸೆ ಮನದಲ್ಲಿ ಬಲವಾಗಿದ್ದರೂ ಕಾರಣವೆಂಬಂತೆ ಸೀತೆಯನ್ನು ಪಡೆಯಲು ತಪಸ್ಸನ್ನಾಚರಿಸಿ ಪಡೆದ ಶಕ್ತಿಯನ್ನು ಅವಳಿಗಾಗಿಯೇ ವ್ಯಯಿಸುತ್ತೇನೆ ಎನ್ನುತ್ತಾರೆ. ನಂತರ ಕನಸನ್ನು ಕಂಡ ರಾವಣನ ಮನಸ್ಸು ಸಂಪೂರ್ಣವಾಗಿ ಕದಡಿಹೋಗುತ್ತದೆ. ಮಂಡೋದರಿ, ಪ್ರಿಯೆ ನನ್ನನ್ನು ಕಾಪಾಡು ಎಂದು ಗೊಳ್ಗರೆಯುತ್ತಾರೆ, ಮೀಸೆವೊತ್ತ ದೈತ್ಯಚಕ್ರವರ್ತಿಯ ಹಸುಳೆಯಳುವನ್ನು ಕೇಳಿ ಬೆದರಿದ ಅವಳು ಶಿವಮಂದಿರವನ್ನು ಹೊಕ್ಕು ತೊಡೆಯ ಮೇಲೆ ಗಂಡನ ತಲೆಯನ್ನಿರಿಸಿಕೊಂಡು, ಹಣೆಯ ಬೆವರನ್ನೊರಸಿ ಬೀಸಣಿಗೆ ಬೀಸಿ ಉಪಚರಿಸುತ್ತಾ ಹಾಳು ಕನಸಿಗ ’ ಹೆದರುವುದೇಕೆ? ಎಂದಳು. ದೇವಿ, ನಾನು ಕಂಡದ್ದು ಕನಸಲ್ಲ, ನನ್ನ ಅಹಂಕಾರವೆಲ್ಲ ನಶಿಸಿ ಮರುಹುಟ್ಟನ್ನೇ ಪಡೆದಂತಾಯಿತು. ಅಲ್ಲೊಂದು ವಿನೋದದ ಸಂಗತಿ ನಡೆಯಿತು, ಕೇಳು, ಯಾವುದೋ ಋಷ್ಯಾಶ್ರಮದಲ್ಲಿ ನಾನೂ ಸತ್ತ ನನ್ನ ತಮ್ಮನೂ ಸೀತೆಯ ತೊಡೆಯನ್ನೇರಿ ರೋಧಿಸುತ್ತಿದ್ದಂತೆ ಎಂದು ಅಷ್ಟಕ್ಕೆ ಮಾತು ನಿಲ್ಲಿಸಿ ಸುಮ್ಮನಿದ್ದ ಪತ್ನಿಯನ್ನು ಕುರಿತು

ಮಂಡೋದರಿ **'ಕನಸಾಯಿತೆ?'** ಎಂದಳು. ಅಲ್ಲ ಅಲ್ಲ ಕನಸಲ್ಲ ಆ ಅನುಭವ ವಿಶೇಷವನ್ನು ಹೇಳುವುದಾದರೂ ಹೇಗೆ? ಅದು ಅನಿರ್ವಚನೀಯ. ಆ ಅನುಭವವಾದದ್ದು ನನಗೆ ಇದೇ ಮೊದಲು ಅದು ದಿಟವಾಗಿಯೂ ಕನಸಲ್ಲ! ಸೀತೆಯಲ್ಲಿರುವ ನಿನ್ನ ಸಾತ್ತ್ವಿಕ ಭಾವವೇ ಕನಸಿನಲ್ಲಿ ಪ್ರತಿಮೆಯ ರೂಪವನ್ನು ತಾಳಿತಲ್ಲವೆ? ದೇವಿ ಪಾಪಿಯನ್ನು ಕೈಬಿಡದೆ ಪುಣ್ಯವಂತನನ್ನಾಗಿ ಮಾಡಿದ ದೇವಿ ನೀನೊಬ್ಬಳೆ! ಆ ಪ್ರಶಂಸೆಗೆ ತಲೆಬಾಗಿ ಕಾಲು ಹಿಡಿದ ಸತಿಯ ು ಕಣ್ಣೀರನ್ನೊರಸಿ ನಿಜವಾಗಿಯೂ ನೀನೊಬ್ಬಳೆ! ಮತ್ತೆ ಆ ಸೀತೆ! ಎನ್ನುತ್ತ ಮನಸ್ಸಿನಲ್ಲಿ ಮೂಡಿದ ಆ ಸೀತಾಮೂರ್ತಿಗೆ ನಮಸ್ಕರಿಸಿ **"**ನಿನಗಿಂತ ಆ ಸೀತೆ ಮಿಗಿಲು, ಅವಳೆನ್ನ ದೇವತೆ, ಮಾತೆ! ಶ್ರದ್ಧೆಯ ುನ್ನು ತುಂಬಿ ನನ್ನಾತ್ಮವನ್ನುದ್ಧರಿಸಿದ ಪುಣ್ಯಮಾತೆ ಅವಳು ಎಂದು ತನ್ನಂತರಂಗವನ್ನು ನುಡಿದನು. ಆ ನುಡಿಯನ್ನು ಕೇಳಿ ಹರ್ಷಗೊಂಡ ಮಂಡೋದರಿ ನಾನಿನ್ನು ಧನ್ಯೆ, ನನ್ನ ಬಾಳು ಸಾರ್ಥಕವಾಯಿತು. ಸಾವೇ ಬರಲಿ, ಬದುಕೇ ಇರಲಿ ನನಗಿನ್ನು ವ್ಯಥೆಯಿಲ್ಲ. ನಿನ್ನ ಹೃದಯ ಔ ಪರಿವರ್ತನೆಯಾಯಿತಲ್ಲ ಎಂದು ಕಣ್ಣೀರು ಸುರಿಸ ುತ್ತಾ **"**ಸೀತೆಯನ್ನು ರಾಮನಿಗರ್ಪಿಸಿ, ತಪ್ಪೊಪ್ಪಿಕೊಂಡು ಕ್ಷಮೆಯನ್ನು ಬೇಡುತ್ತೇನೆ ಎಂದು ಮಂಡೋದರಿ ಹೇಳಿದಾಗ ನಿನಗೆ ಆ ಶ್ರಮ ಬೇಡ, ಆ ಶಿಕ್ಷೆ ನನಗಿರಲಿ, ಅದನ್ನು ಶಿಕ್ಷೆ ಎಂದು ತಿಳಿಯಬೇಡ ಅದು ವೀರದೀಕ್ಷೆ, ದೇವಿ, **"**ನನ್ನನ್ನು ಗೆದ್ದ ಸೀತೆಗೆ ರಾಮನನ್ನು ಗೆದ್ದು ತಂದು ಕಪ್ಪವನ್ನು ಸಲ್ಲಿಸುತ್ತೇನೆಂದು**"** ರಾವಣನು ಹ ೇಳುತ್ತಾನೆ.

**ಉಪಸಂಹಾರ:**

ಒಟ್ಟಾರೆಯಾಗಿ ಸ್ವಪ್ನಗಳು, ಕವಿಗಳ ಪಾಲಿಗೆ ಅನುಭವ ದ್ರವ್ಯದ ಒಂದು ಭಾಗ. ಸ್ವಪ್ನಗಳನ್ನು ಕಾವ್ಯದ ವಸ್ತುವನ್ನಾಗಿ, ಸಂಕೇತ, ಪ್ರತೀಕ, ಪ್ರತಿಮೆಗಳನ್ನಾಗಿ, ತಮ್ಮ ನಿರೂಪಣೆಯ ತಂತ್ರಗಳನ್ನಾಗಿ ಬಳಸಿಕೊಂಡಿರುವುದು ಒಂದು ಸ್ವಾರಸ್ಯದ ಸಂಗತಿಯಾಗಿದೆ.

## ಪರಾಮರ್ಶನಗಳು


1. ಮೂಲ ಕೃತಿ ಕುವೆಂಪು ಅವರ ಶ್ರೀರಾಮಾಯಣದರ್ಶನಂ
2. naanugauri.com ಜಾಲತಾಣದ ವೆಬ್ ಪೇಜ್
3. ಶ್ರೀರಾಮಾಯಣ ದರ್ಶನಂ ವಿಕಿಪೀಡಿಯಾ http://surl.li/qnjzg
4. ಋತುಮಾನ ಎಂಬ ಯೂಟ್ಯೂಬ್ ಪೇಜ್‌ನಲ್ಲಿ ಕೆವೈನಾರಾಯಣಸ್ವಾಮಿ ಅವರ ವ್ಯಾಖ್ಯಾನ https://ruthumana.com/2020/04/28/sri-ramayana-darshanam-dreams-part-1/